

# 'ಮಾತು'

***1***

ಬೆಳಗಾದಾಗ ತಾಯಿಹಕ್ಕಿ
ರೆಕ್ಕೆ ಬೀಸಿ ಆಹಾರವನ್ನರಸಿ
ಹಾರಿ ಹೋಗುವ ಮುನ್ನ

ಅದಿದ್ದ ಮರ ಕಟ್ಟಿದ್ದ ಗೂಡು
ಕಾವು ಕೂತಿದ್ದ ತನ್ನೊಡಲ ಮರಿ
ಅಲ್ಲೇ ಇತ್ತು ಸುರಕ್ಷಿತ

***2***

ಮುಸ್ಸಂಜೆ ಮಬ್ಬುಗತ್ತಲಲ್ಲಿ
ಮರಳಿ ಬಂದ ತಾಯಿ ಹಕ್ಕಿ
ದಿಕ್ಕು ತಪ್ಪಿದಂತೆ ಹೌಹಾರಿ

ತನ್ನ ಮರವನ್ನರಸುತ್ತ
ತನ್ನ ಗೂಡನ್ನರಸುತ್ತ
ತನ್ನ ಮರಿಯನ್ನರಸುತ್ತ
ಸುತ್ತಮುತ್ತ ನೋಡುತ್ತಿತ್ತು
ರೆಕ್ಕೆ ಬಡಿದು ಕೇಳುತ್ತಿತ್ತು
ಕೊರಳು ಬಿರಿದು ಅಳುತ್ತಿತ್ತು

***3***

ನನಗೆ
ಅದಿದ್ದ ಮರ ಗೊತ್ತಿತ್ತು
ಮರದಲ್ಲಿದ್ದ ಗೂಡು ಗೊತ್ತಿತ್ತು
ಗೂಡೊಳಗಿದ್ದ ಮರಿ ಗೊತ್ತಿತ್ತು

ನನಗೆ
ಆದುದು ಏನೆಂದು ಗೊತ್ತಿತ್ತು
ಅದನ್ನು ತಾಯಿ ಹಕ್ಕಿಗೆ ಹೇಳಲು
ಆದರ ಮಾತು ಮಾತ್ರ ಗೊತ್ತಿರಲಿಲ್ಲ!

**● ತೇರ್‌ಳಿ ಎನ್‌. ಶೇಖರ್**

ಕಲೆ: ವಾಗೀಶ ಹೆಗಡೆ